ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 27.3.2000ದ ಸೋಮವಾರದಂದು ಪ್ರಶ್ನೋತ್ತರ ಇಲ್ಲದಿದ್ದ ಕಾರಣ 6ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 8 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 218 ಪ್ರಶ್ನೆಗಳ ಪೈಕಿ 155 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಯನ್ನು ಬಳಸಿ ವಿದ್ಯುತ್ ಉತ್ಪಾದನೆ

723 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಬಸಪ್ಪನ ಗುಡಿಯ ಹತ್ತಿರ ಇರುವ ಗಾಳಿ ವೇಗ ಎಷ್ಟು?

ಆ) ಈ ಪ್ರದೇಶದಲ್ಲಿ ವೇಗದ ಗಾಳಿಯನ್ನು ಬಳಸಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಬಹುದು, ಇಲ್ಲಿಯವರೆಗೆ ಎಷ್ಟು ವಿದ್ಯುತ್ ಉತ್ಪಾದನೆಗೆ ಮಂಜೂರಾತಿ ನೀಡಲಾಗಿದೆ. ಅವು ಯಾವ ಹಂತದಲ್ಲಿದೆ, ಸಂಪೂರ್ಣ ವಿವರಗಳನ್ನು ನೀಡುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಬಸಪ್ಪನ ಗುಡಿ ಹತ್ತಿರ ಇರುವ ಗಾಳಿಯ ವೇಗದ ಪ್ರಮಾಣ ವಾರ್ಷಿಕ ಸರಾಸರಿ ಪ್ರತಿ ಗಂಟೆಗೆ 27 ಕಿ.ಮೀ. ದಿಂದ 29 ಕಿ.ಮೀ. ಇದ್ದು, ಗಾಳಿಯ ಸಾಂದ್ರತೆ ಪ್ರತಿ ಚದುರ ಮೀಟರ್‌ಗೆ ಸುಮಾರು 350 ರಿಂದ 400 ವ್ಯಾಟ್ಸ್ ಇರುತ್ತದೆ.

ಆ) ಈ ಪ್ರದೇಶದಲ್ಲಿ ವೇಗದಗಾಳಿಯನ್ನು ಬಳಸಿ 30 ಮೆ. ವ್ಯಾ. ಸಾಮರ್ಥ್ಯದ ಗಾಳಿಶಕ್ತಿಯ ವಿದ್ಯುತ್ ಘಟಕ ಸ್ಥಾಪಿಸಿ ಪ್ರತಿ ವರ್ಷ 60 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಮಾರ್ಚ್ 2000 ಇಸವಿಯವರೆಗೆ ಈ ಪ್ರದೇಶದಲ್ಲಿ ಕೆ.ಪಿ.ಸಿ.ಎಲ್. ನ್ನೊಳಗೊಂಡು ಒಟ್ಟು 5 ಕಂಪನಿಗಳಿಗೆ 26.5 ಮೆ. ವ್ಯಾ. ಸಾಮರ್ಥ್ಯದ ಗಾಳಿ ಶಕ್ತಿ ಘಟಕಗಳನ್ನು ಸ್ಥಾಪಿಸಲು ಈ ಕೆಳಕಂಡ ಸಂಸ್ಥೆಗಳಿಗೆ ಅನುಮತಿ ನೀಡಿರುತ್ತದೆ.

1.	ಕರ್ನಾಟಕ ವಿದ್ಯುತ್ ನಿಗಮ ನಿ	-	4.5 ಮೆ.ವ್ಯಾ
2.	ವಿಕ್ಟರಿ ಗ್ಲಾಸ್ ಆ್ಯಂಡ್ ಇಂಡಸ್ಟ್ರೀಸ್	-	2.0 ಮೆ.ವ್ಯಾ
3.	ಇಂಡೊವಿಂಡ್ ಎನರ್ಜಿ ಲಿ.	-	5.0 ಮೆ.ವ್ಯಾ
4.	ಗದಗ ಕೋ - ಆ ಇಂಡಸ್ಟ್ರೀಸ್ ಲಿ	-	5.0 ಮೆ.ವ್ಯಾ
5.	ಸುಭಾಷ್ ಪ್ರೊಜೆಕ್ಟ್ಸ್ ಆ್ಯಂಡ್ ಮಾರ್ಕೆಟಿಂಗ್ ಲಿ.	-	10.0 ಮೆ.ವ್ಯಾ